

"ಹಾ–ಹಾ–ಹಾ" ಮೊದಲ ವ್ಯಕ್ತಿ ಮೈ ಕುಲುಕ್ಯಾಡಿಸಿ ನಕ್ಕರು. "ಕವಿಯಾಗಬೇಕಿತ್ತು ಸರ್, ನೀವು ಎಷ್ಟು ಚಂದಕ್ಕೆ ಒಂದು ತಿರುವು ಕೊಟ್ಟುಬಿಡುತ್ತೀರಿ! ಅಲ್ಲಿ ಬೆಳಕು ಬೇರೆಯದೇ ದಿಕ್ಕಿನಿಂದ ಬಿಸಿಲುಕೋಲಿನಂತೆ ಬಿದ್ದು, ಅದೇ ಮಾತು, ಅದೇ ದೃಶ್ಯ... ಆದರೆ ಬೇರೆಯದೇ ಬಣ್ಣ!"

ಈಗ ನಗುವ ಸರದಿ ಎರಡನೆಯ ವ್ಯಕ್ತಿಯದಾಯಿತು. ತುಂಬ ಕಷ್ಟ ಪಟ್ಟು ನಗು ತಡೆದು ಹೇಳಿದರು: "ನಾನು ಕವಿಯಾಗಬಹುದಿತ್ತು... ಆಗಬಹುದಿತ್ತು... ಅಥವಾ ಎಂದಿಗೂ ಆಗಲಾರೆ. ಆದರೆ ಒಂದು ಮಾತು ನಿಜ, ನೀವು ವಿಮರ್ಶಕರಾಗಬಹುದಿತ್ತು."

ಮೊದಲ ವ್ಯಕ್ತಿ ಮತ್ತೆ ನಕ್ಕರು. ಕೂತಲ್ಲೇ ಹೊರಳಾಡಿ ನಕ್ಕರು... ಹೇಳಿದರು:

"ಅಂದರೆ ನಮ್ಮಿಬ್ಬರಿಗೂ ನಾವೇನಾಗಿದ್ದೇವೆ ಅದರಲ್ಲಿ ತೃಪ್ತಿ ಇಲ್ಲ ಎಂದಾಯಿತು."

"ಅರೆರೇ ಹೌದಲ್ಲವೇ ನನಗಿದು ಹೊಳೆಯಲೇ ಇಲ್ಲ."

"ನೋಡಿ ಸರ್, ನೋಡಿ ನೋಡಿ, ಅತಿಸಾಮಾನ್ಯ ವ್ಯಕ್ತಿಗೆ ಹೊಳೆಯುವ ಸಂಗತಿಗಳೂ ಕೆಲವೊಮ್ಮೆ ದೊಡ್ಡವರಿಗೆ ಹೊಳೆಯೋದಿಲ್ಲ, ತಿಳಿಯೋದಿಲ್ಲ."

"ಬೆಳಕು ಹರಿಯೋದಿಲ್ಲ" ಎರಡನೆಯ ವ್ಯಕ್ತಿ ಮೊದಲ ವ್ಯಕ್ತಿಯ ಮಾತಿನ ಓಘದಲ್ಲೇ ಹೇಳಿದರು.

"ಬೆಳಕು ಹರಿಯೋದಿಲ್ಲ, ಹರಿಯೋದಿಲ್ಲ ಯಾಕೆ ಎಂಬುದೂ ನಿಮಗೆ ಗೊತ್ತಾಗೋದಿಲ್ಲ, ನನಗೆ ಗೊತ್ತಾಗ್ತದೆ, ನಮ್ಮಂಥ ಸಾಮಾನ್ಯ ಜನರಿಗೆ ಗೊತ್ತಾಗ್ತದೆ ಸರ್. ನೀವು ಬೆಳಕಿಗೆ ಕೈ ಅಡ್ಡ ಹಿಡಿದಿದ್ದೀರಿ. ಅಷ್ಟು ದೊಡ್ಡ ಬೆಳಕಿನ ಕಣ್ಣು ಕುಕ್ಕುವಿಕೆಯ ದೃಶ್ಯಾವಳಿಗಳಲ್ಲೇ ಬೆಳಗಿನಿಂದ ಸಂಜೆತನಕ ಇರ್ತೀರಿ, ಅದರಿಂದ ಬೆಳಕು ನಿಮ್ಮೊಳಗೆ ಹರಿಯೋದಿಲ್ಲ, ಇಳಿಯೋದಿಲ್ಲ."

"ನೀವು ಯಾರೂಂತ ಹೇಳಲೇ ಇಲ್ಲ."

"ಹೇಳ್ತೇನೆ. ಅದೇನೂ ದೊಡ್ಡ ವಿಷಯವೇ ಅಲ್ಲ. ನಾನು ಯಾರು? ಯಾಕೆ ಬೇಕು ನಿಮಗೆ ಅದು? ಬೇಕಾಗೋದಿಲ್ಲ. ಸಂಸ್ಕೃತಿ ಚಿಂತಕರು ನೀವು. ದೊಡ್ಡ ದೊಡ್ಡ ದಪ್ಪ ಶಬ್ದಗಳಲ್ಲಿ ಚಿಂತನೆ ಮಾಡ್ತೀರಿ. ಈ ದೇಶದಲ್ಲಿ ಏನಾಗ್ತಿದೆ, ಏನಾಗ್ಬೇಕು ಅಂತೆಲ್ಲಾ ಹೇಳ್ತೀರಿ."

"ಸಂಸ್ಕೃತಿ ಚಿಂತಕ! ಸ್ವಾಮೀ, ನಾನ್ಯಾಕ್ರೀ ಸಂಸ್ಕೃತಿ ಚಿಂತಕ ಆಗ್ತೇನೆ? ನನಗೆ ತಿಳಿದಂತೆ ಯೋಚಿಸುತ್ತಾ ಹೋಗುತ್ತೇನೆ. ನಮ್ಮ ಜನರಿಗೆ ಒಳ್ಳೆಯದಾಗಲಿ ಅಂತ ಮನಸಾ ಹಾರೈಸ್ತೇನೆ, ನನಗನಿಸಿದ್ದನ್ನ ಹೇಳ್ತಾ ಹೋಗ್ತೇನೆ."

"ಗೊತ್ತು ಸರ್, ನನಗೆ ಗೊತ್ತಿದೆ. ನಿಮ್ಮ ಸರಳತೆ ನನಗೆ ಇಷ್ಟ. ಸ್ವಾಭಾವಿಕ ನಡವಳಿಕೆಯಿಂದ ಒಳ್ಳೆಯ ಹೆಸರು ಗಳಿಸಿದ್ದೀರಿ. ತಮ್ಮ ರಾಜಕೀಯ ಪ್ರಭಾವದಿಂದ ವೈಯಕ್ತಿಕ ಅನುಕೂಲ ಮಾಡಿಕೊಂಡವರಲ್ಲ ನೀವು. ನಿಮಗೆ ಇಷ್ಟವಿಲ್ಲವಾದ್ರೂ ಜನ ನಿಮ್ಮನ್ನು ಸಂಸ್ಕೃತಿ ಚಿಂತಕ ಅಂತ ಕರೀತಾರೆ. ಅದೇನೂ ಕೆಟ್ಟ ಪದವಲ್ಲ. ಆದರೂ ಅಷ್ಟು ಭಾರವಾದ ಪದ ನನಗೆ ಬೇಡ ಅಂತ ನೀವು ಅಂತೀರಿ. ಇನ್ನು ಕೆಲವರು